ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 20 ನೇ ಮಾರ್ಚ್, 2020

ಮಹಿಳಾ ಮೇಲ್ವಿಚಾರಕಿಯರ ಸ್ಥಳ ನಿಯುಕ್ತಿಯಲ್ಲಿ ಉಂಟಾದ ಗೊಂದಲಗಳ ಕುರಿತು

ಡಾ: ಚಂದ್ರಶೇಖರ್ ಬಿ ಪಾಟೀಲ್(ಪದವೀಧರರ ಕ್ಷೇತ್ರ):-

1386 (1608) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೆ.ಪಿ.ಎಸ್.ಸಿ. ಯಿಂದ ನೇಮಕಗೊಂಡ ಮಹಿಳಾ ಮೇಲ್ವಿಚಾರಕಿಯರ ಸ್ಥಳ ನಿಯುಕ್ತಿಯಲ್ಲಿ ಗೊಂದಲಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಗೊಂದಲಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು ;

(ಇ) ಸದರಿ ಸ್ಥಳ ನಿಯುಕ್ತಿಗಳು ನಿಯಮಗಳ ಪ್ರಕಾರ ನಡೆದಿದೆಯೇ; ಯಾವ ರೀತಿಯಲ್ಲಿ ಸ್ಥಳ ನಿಯುಕ್ತಿಗಳನ್ನು ಮಾಡಲಾಗಿದೆ ; (ವಿವರ ನೀಡುವುದು)

(ಈ) ಎಲ್ಲಾ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಯನ್ನು ಕೌನ್ಸಿಲಿಂಗ್ ಮುಖಾಂತರ ಏಕಕಾಲದಲ್ಲಿ ಮಾಡಲಾಗಿದೆಯೇ ;

(ಉ) ಕೌನ್ಸಿಲಿಂಗ್‌ಗೆ ಹಾಜರಾಗಲು ಎಲ್ಲಾ ಅಭ್ಯರ್ಥಿಗಳಿಗೆ ಸಾಕಷ್ಟು ಸಮಯಾವಕಾಶ ನೀಡಲಾಗಿತ್ತೇ ; ಸಮಯಾವಕಾಶ ನೀಡಲಾಗಿದ್ದಲ್ಲಿ ಎಷ್ಟು ಸಮಯಾವಕಾಶ ನೀಡಲಾಗಿತ್ತು ; (ವಿವರ ನೀಡುವುದು)

(ಊ) ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಅನುಸರಿಸುವ ಮಾನದಂಡಗಳು ಮತ್ತು ನೀತಿ ನಿಯಮಗಳು ಏನಾದರೂ ಇವೆಯೇ ; ಇದ್ದಲ್ಲಿ, ಅವುಗಳ ಪ್ರತಿ ಒದಗಿಸುವುದು ;

(ಋ) ಕೌನ್ಸಿಲಿಂಗ್ ಮಾಡುವ ಮೊದಲು ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸಲಾಗಿದೆಯೇ ; ಪ್ರಕಟಿಸಿದ್ದಲ್ಲಿ ಯಾವಾಗ ಪ್ರಕಟಿಸಲಾಗಿತ್ತು;

(ಎ) ಆಗಿರುವ ಗೊಂದಲವನ್ನು ಮತ್ತು ಅನ್ಯಾಯವನ್ನು ಸರಿಪಡಿಸಲು ಇನ್ನೊಮ್ಮೆ ಎಲ್ಲಾ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ ; ಈ ಕುರಿತು ಸರ್ಕಾರ ನಿಲುವು ಏನು ?